# ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ಸಂಕ್ಷಿಪ್ತ ವಾರ್ಷಿಕ ವರದಿ : ೨೦೧೨–೧೩

**ರಾ**ಮಕೃಷ್ಣ ಮಿಷನ್ ಆಡಳಿತ ಮಂಡಳಿಯ ೧೦೨ನೇ ವಾರ್ಷಿಕ ಸರ್ವಸದಸ್ಯರ ಸಭೆಯು ೨೦೧೩ರ ಡಿಸೆಂಬರ್ ೧೫, ಭಾನುವಾರದಂದು ಮಧ್ಯಾಹ್ನ ೩:೩೦ಕ್ಕೆ ಬೇಲೂರು ಮಠದಲ್ಲಿ ಜರುಗಿತು.

ಚೆನ್ನೈನ ಭಗವಾನ್ ಮಹಾವೀರ ಫೌಂಡೇಷನ್ ಅವರು ನಮ್ಮ **ಇಟಾನಗರ** ಆಸ್ಪತ್ರೆಗೆ ಸಮುದಾಯ ಮತ್ತು ಸಾಮಾಜಿಕ ಸೇವಾಕ್ಷೇತ್ರದಲ್ಲಿನ ಉತ್ಕೃಷ್ಟತೆಗಾಗಿ ೧೫ನೇ ಮಹಾವೀರ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದಾರೆ. ಹಾಗೆಯೇ **ಛತ್ತೀಸ್‌ಘರ್** ರಾಜ್ಯ ಸರ್ಕಾರವು ೨೦೧೨ನೇ ಸಾಲಿನ ಡಾ. ಭನ್ವರ್‌ಸಿಂಗ್ ಪೋರ್ತೆ ಸ್ಮಾರಕ ಬುಡಕಟ್ಟು ಜನಾಂಗದವರ ಸೇವೆಗಾಗಿನ ಪ್ರಶಸ್ತಿಯನ್ನು ನಮ್ಮ **ನಾರಾಯಣಪುರ** ಕೇಂದ್ರಕ್ಕೆ ಕೊಡಮಾಡಿದೆ.

ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವ: ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯು ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವದ ಉದ್ಘಾಟನಾ ಸಮಾರಂಭವನ್ನು ೨೦೧೩ರ ಜನವರಿ ೧೨ ರಂದು ರಾಷ್ಟ್ರಪತಿ ಭವನದಲ್ಲಿ ಏರ್ಪಡಿಸಿತ್ತು. ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿ.ಬಿ.ಎಸ್.ಇ) ರಾಮಕೃಷ್ಣ ಮಿಷನ್ನಿನ ಕಡೆಯಿಂದ ನಡೆಯುತ್ತಿರುವ ಆರು ಶಾಲೆಗಳೂ ಸೇರಿ, ಬೋರ್ಡ್‌ಗೆ ಒಳಪಟ್ಟ ೪೦ ಶಾಲೆಗಳಿಗೆ 'ವಿವೇಕಾನಂದ ಉತ್ಕೃಷ್ಟ ಶಾಲಾ ಪ್ರಶಸ್ತಿ' ಯನ್ನು ನೀಡಿದೆ. ಮಹೋತ್ಸವದ ಅಂಗವಾಗಿ ೨೦೧೦ರಲ್ಲಿ ಆರಂಭಗೊಂಡ, ಕೇಂದ್ರಸರ್ಕಾರ ಪ್ರಾಯೋಜಿತ ಸೇವಾಕಾರ್ಯಗಳು ಇನ್ನೂ ಮುಂದುವರೆದಿದ್ದು, ೮.೧೦.೨೦೧೦ರಿಂದ ಹಿಡಿದು ೩೦.೬.೨೦೧೩ರವರೆಗೆ ಅವುಗಳಿಗಾಗಿ ಒಟ್ಟಾರೆ ೫೧.೭೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಈ ವರ್ಷದಲ್ಲಿ ಮಿಷನ್ನಿನ ಕಡೆಯಿಂದ ಒಡಿಸಾ ರಾಜ್ಯದ **ಕೊಥಾರ್**ನಲ್ಲಿ ಒಂದು ಹೊಸ ಕೇಂದ್ರವನ್ನು ಆರಂಭಿಸಲಾಯಿತು. ಭಾರತದ ಹೊರಗಡೆ, ನೇಪಾಲದ **ಕಟ್ಮಂಡು** ಹಾಗೂ ಬಾಂಗ್ಲಾ ದೇಶದ **ಬಗೇರ್‌ಹಾಟ್** ಮತ್ತು **ಮೈಮೆನ್ಸಿಂಗ್**ಗಳಲ್ಲಿ ನೂತನ ಮಿಷನ್ ಕೇಂದ್ರಗಳು ಸ್ಥಾಪನೆಗೊಂಡವು. ರಾಮಕೃಷ್ಣ ಮಠದ ನೂತನ ಶಾಖೆಯೊಂದನ್ನು ಬಾಂಗ್ಲಾದೇಶದ **ಕೊಮಿಲ್ಲಾ** ಎಂಬ ಸ್ಥಳದಲ್ಲಿ ಆರಂಭಿಸಲಾಗಿದೆ. ಇದಲ್ಲದೆ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಂಯುಕ್ತ ಶಾಖೆಯನ್ನು ಬಾಂಗ್ಲಾದೇಶದ **ಜೆಸ್ಸೂರಿನಲ್ಲಿ** ಸ್ಥಾಪಿಸಲಾಗಿದೆ. ಫಿಜಿ ದೇಶದಲ್ಲಿ ನಮ್ಮ ನಾಡಿ ಕೇಂದ್ರದ ಉಪಕೇಂದ್ರವೊಂದು **ಸುವಾ** ಎನ್ನುವ ಊರಿನಲ್ಲಿ ಪ್ರಾರಂಭಗೊಂಡಿದೆ.

೧. ಶೈಕ್ಷಣಿಕ ಕ್ಷೇತ್ರ : ೧) ನಮ್ಮ **ನರೇಂದ್ರಪುರ** ಕಾಲೇಜು National Assessment and Accreditation Council (NAAC) ಸಂಘಟನೆಯ ವತಿಯಿಂದ 'A- Grade' (ಅತ್ಯುಚ್ಚ ಶ್ರೇಣಿ) ಪಡೆದಿದೆ. ೨) **ಚೆನ್ನೈ ಸ್ಟೂಡೆಂಟ್ ಹೋಮಿನ ಪಾಲಿಟೆಕ್ನಿಕ್ ಕಾಲೇಜಿಗೆ** NIQR-TVN Kidao outstanding Educational Institution ಪ್ರಶಸ್ತಿ ಬಂದಿದೆ. ೩) **ರಹರಾದ ಸ್ವಾಮಿ ವಿವೇಕಾನಂದ ಸೆಂಟಿನರಿ ಕಾಲೇಜಿನಲ್ಲಿ** ಎಂ.ಎಸ್.ಸಿ. ಬಾಟನಿ ಕೋರ್ಸ್ ಅನ್ನು ಆರಂಭಿಸಲಾಗಿದೆ. ೨. ವೈದ್ಯಕೀಯ ಕ್ಷೇತ್ರ : ೧) **ಲಖನೌ** ಆಸ್ಪತ್ರೆಯಲ್ಲಿ ಹಲವಾರು ನೂತನ ವೈದ್ಯಕೀಯ ಸಲಕರಣೆಗಳನ್ನು ಸ್ಥಾಪಿಸಲಾಗಿದೆ. ೨) **ವಾರಾಣಸಿ ಸೇವಾಶ್ರಮದ ಆಸ್ಪತ್ರೆಯಲ್ಲಿ** ೮ ಹಾಸಿಗೆಗಳುಳ್ಳ High dependency Unit ಅನ್ನು ಆರಂಭಿಸಲಾಗಿದೆ. ೩. **ಸಾರಗಾಚಿಯ** ಔಷಧಾಲಯದಲ್ಲಿ ಹಲವಾರು ವೈದ್ಯಕೀಯ ಸೌಲಭ್ಯಗಳನ್ನು ನೂತನವಾಗಿ ಒದಗಿಸಲಾಗಿದೆ. ೪. ನಮ್ಮ **ಇಟಾನಗರ ಆಸ್ಪತ್ರೆಯ** ಪ್ರಯೋಗಶಾಲೆಯಲ್ಲಿ ಹಲವು ನೂತನ ಉಪಕರಣಗಳನ್ನು ಅಳವಡಿಸಲಾಗಿದೆ. ೩. ಗ್ರಾಮೀಣಾಭಿವೃದ್ಧಿ ಕ್ಷೇತ್ರ : ೧) **ನಾರಾಯಣಪುರ** ಕೇಂದ್ರದ ವತಿಯಿಂದ ತಾಂತ್ರಿಕ ತರಬೇತಿ ಕೇಂದ್ರದ ಸ್ಥಾಪನೆ ೨) **ಸಾರಗಾಚಿ** ಕೇಂದ್ರದ ವತಿಯಿಂದ ಕೌಶಲ್ಯಗಳ ಅಭಿವೃದ್ಧಿ ಕೇಂದ್ರದ ಪ್ರಾರಂಭ.

ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ಈ ನೂತನ ಯೋಜನೆಗಳು ಗಮನಾರ್ಹ : ೧) **ಕೊಲ್ಕತಾದ ಬಲರಾಮ ಮಂದಿರದಲ್ಲಿ** 'ಶ್ರೀರಾಮಕೃಷ್ಣ ದಿವ್ಯ ಲೀಲಾ ಪ್ರದರ್ಶನಿ'ಯ ಉದ್ಘಾಟನೆ ೨) **ಪುಣೆಯ ಕ್ಲಿನಿಕ್**ನಲ್ಲಿ Fully Automatic Biochemistry Analyzer ಮತ್ತು Dental Chair ಗಳ ಅಳವಡಿಕೆ ೩) **ಪೊನ್ನಂಪೇಟೆಯ** ಕೇಂದ್ರದಿಂದ ಗ್ರಾಮೀಣ ಬುಡಕಟ್ಟು ಜನಾಂಗದವರ ಬಗ್ಗೆ ವಿಚಾರಸಂಕಿರಣ.

ಭಾರತದ ಹೊರಗೆ ಈ ಹೊಸ ಬೆಳವಣಿಗೆಗಳು ಉಲ್ಲೇಖಾರ್ಹ : ೧) ಶ್ರೀಲಂಕಾದ ಕೊಲಂಬೋ ಕೇಂದ್ರದ ಉಪಕೇಂದ್ರವಾದ **ಬಟ್ಟಿಕಲೋವಾದಲ್ಲಿ** ಬಾಲಕರ ನಿವಾಸದ ಅಧ್ಯಯನ ಕೊಠಡಿ ಮತ್ತು ಶ್ರೀಶಾರದಾ ನರ್ಸರಿ ಶಾಲೆಯ ಕಟ್ಟಡದ ನಿರ್ಮಾಣ ೨) ಬಾಂಗ್ಲಾದೇಶದ **ಬಲಿಯಾಟಿ** ಕೇಂದ್ರದಲ್ಲಿ ಸಾಧುನಿವಾಸ ಮತ್ತು ಔಷಧಾಲಯ ಕಟ್ಟಡಗಳ ನಿರ್ಮಾಣ ೩) ಅಮೆರಿಕದ **ಪ್ರಾವಿಡೆನ್ಸ್** ಕೇಂದ್ರದಲ್ಲಿ ನೂತನ ಪೂಜಾಗೃಹದ ನಿರ್ಮಾಣ.

೨೦೧೨–೧೩ ರ ಸಾಲಿನ ಸೇವಾಕಾರ್ಯಗಳ ಒಟ್ಟು ಸಾರಾಂಶ : **೧. ಪರಿಹಾರ ಮತ್ತು ಪುನರ್ವಸತಿ :** ಪ್ರಸಕ್ತ ಸಾಲಿನಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ದೇಶದ ವಿವಿಧ ಭಾಗಗಳಲ್ಲಿ ಬೃಹತ್ ಪ್ರಮಾಣದ ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳನ್ನು ನಡೆಸಿದೆ. ೨.೨೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗೊಂಡ ಯೋಜನೆಗಳಿಂದ ೪೧೫ ಗ್ರಾಮಗಳ, ೧ ಲಕ್ಷ ಕುಟುಂಬಗಳ, ೪.೯೪ ಲಕ್ಷ ಜನರು ನೆರವನ್ನು ಪಡೆದಿದ್ದಾರೆ. **೨. ಸಮಾಜ ಕಲ್ಯಾಣ ಕಾರ್ಯಕ್ರಮಗಳು:** ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ೧೧.೫೫ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೃದ್ಧರು, ರೋಗಿಗಳು ಹಾಗೂ ನಿರ್ಗತಿಕರಿಗೆ ಆರ್ಥಿಕ ನೆರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗಿದೆ. ಸುಮಾರು ೩೬.೩೦ ಲಕ್ಷ ಫಲಾನುಭವಿಗಳು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. **೩. ವೈದ್ಯಕೀಯ ಸೇವೆಗಳು :** ವೈದ್ಯಕೀಯ ಸೇವೆಗಳಿಗಾಗಿ ೧೪೬.೩೭ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಈ ಯೋಜನೆಗಳ ಅಡಿಯಲ್ಲಿ ೧೫ ಆಸ್ಪತ್ರೆಗಳು, ೧೨೫ ಚಿಕಿತ್ಸಾಲಯಗಳು, ೬೦ ಸಂಚಾರಿ ವೈದ್ಯಕೀಯ ಘಟಕಗಳು ಮತ್ತು ೯೫೩ ವೈದ್ಯಕೀಯ ಶಿಬಿರಗಳ ಮೂಲಕ ಸುಮಾರು ೮೦. ೨೦ ಲಕ್ಷ ಜನರಿಗೆ ವೈದ್ಯಕೀಯ ಸೇವೆಯನ್ನು ಒದಗಿಸಲಾಗಿದೆ. **೪. ಶೈಕ್ಷಣಿಕ ಕಾರ್ಯಕ್ರಮಗಳು:** ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒಟ್ಟು ೨೫೧. ೮೮ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಶಿಶುವಿಹಾರದಿಂದ ವಿಶ್ವವಿದ್ಯಾನಿಲಯದವರೆಗೆ ಇರುವ ನಮ್ಮ ಹಲವಾರು ವಿದ್ಯಾಸಂಸ್ಥೆಗಳಲ್ಲಿ ಸುಮಾರು ೩. ೨೯ ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಿಕ್ಷಣ ಪಡೆದಿದ್ದಾರೆ. **೫. ಗ್ರಾಮೀಣಾಭಿವೃದ್ಧಿ ಮತ್ತು ಬಡಕಟ್ಟು ಜನಾಂಗದವರ ಕಲ್ಯಾಣ ಕಾರ್ಯಕ್ರಮಗಳು :** ಗ್ರಾಮೀಣ ಹಾಗೂ ಬುಡಕಟ್ಟು ಜನಾಂಗದವರಿಗಾಗಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ೪೨. ೬೭ ಲಕ್ಷ ಜನರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಇದಕ್ಕೆ ಖರ್ಚು ಮಾಡಿದ ಮೊತ್ತ ೪೧ . ೨೬ ಕೋಟಿ ರೂಪಾಯಿಗಳು. ಈ ಸಂದರ್ಭದಲ್ಲಿ ರಾಮಕೃಷ್ಣ ಮಿಷನ್ನಿನ ಸಕಲ ಸದಸ್ಯರಿಗೂ ಸ್ನೇಹಿತರಿಗೂ, ಅವರ ಸಹಾಯ ಸಹಕಾರಗಳಿಗಾಗಿ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

ಸ್ವಾಮಿ ಸುಹಿತಾನಂದ

೧೫ ಡಿಸೆಂಬರ್ ೨೦೧೨ ಪ್ರಧಾನ ಕಾರ್ಯದರ್ಶಿಗಳು

Managing Editor : Swami Muktidananda Editor : Swami Vireshananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.D-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020